Ref.No. 243-2015

WW-5,

ದಿನಾಂಕಃ 12-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- 2 ನೇ ಪಾರ್ಟಿ ಪರವಾಗಿಃ ಶ್ರೀ. ಜೆ ಪಿ ವಕೀಲರಿಂದಃ

ನಾನು ಬಿ ಎ ವರೆಗೆ ಓದಿರುತ್ತೇನೆ. ನಾನು 2 ನೇ ಪಾರ್ಟಿ ಸಂಸ್ಥೆಯನ್ನು 20 ಜೂನ್ 2006 ರಲ್ಲಿ ಸೇರಿಕೊಂಡಿರುತ್ತೇನೆ. ನಾನು 2 ನೇ ಪಾರ್ಟಿ ಸಂಸ್ಥೆಯನ್ನು ಸೇರಿಕೊಳ್ಳುವ ಮೊದಲು ಬೇರೆ ಯಾವುದೇ ಸಂಸ್ಥೆಯಲ್ಲಿ ಕೆಲಸ ಮಾಡಿರುವುದಿಲ್ಲ. 2 ನೇ ಪಾರ್ಟಿ ಸಂಸ್ಥೆ ಯವರು ಕೆಲಸ ಖಾಲಿ ಇದೆ ಎಂದು ಸಂಸ್ಥೆಯ ಗೋಡೆಯ ಮೇಲೆ ಪಾಂಪ್ಲೆಟ್ ಹಾಕಿದ್ದರಿಂದ ನಾನು ಕೆಲಸಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನಾನು 2 ನೇ ಪಾರ್ಟಿ ಸಂಸ್ಥೆ ಯಲ್ಲಿ ಕೆಲಸ ಮಾಡುತ್ತಿರಬೇಕಾದರೆ 2013 ರಲ್ಲಿ ಯೂನಿಯನ್ ನ್ನು ರಚನೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಮೈಸೂರು ಜನರಲ್ ಯೂನಿಯನ್ ಅಸೋಸಿಯನ್ ನ ಸದಸ್ಯರಾಗಿರುತ್ತೇವೆ. ಸದರಿ ಯೂನಿಯನ್ ಜನರಲ್ ಯೂನಿಯನ್ ಆಗಿರುತ್ತದೆ 2 ನೇ ಪಾರ್ಟಿ ಸಂಸ್ಥೆ ಗೆ ಸಂಬಂಧಿಸಿದ್ದು ಆಗಿರುವುದಿಲ್ಲ ಎಂದರೆ ಸರಿ . ನಾನು ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಸುಮಾರು 300 ಜನ ಕೆಲಸಗಾರರರು ಇದ್ದರು . 2006 ರಿಂದ 2013 ರವರೆಗೆ ನನ್ನ ಮತ್ತು ಆಡಳಿತ ವರ್ಗ ದವರ ಸಂಬಂಧ ಚೆನ್ನಾಗಿತ್ತು ಎಂದರೆ ಸಾಕ್ಷಿದಾರರು 2011 ರವರೆಗೆ ಚೆನ್ನಾಗಿತ್ತು ಎಂದು ನುಡಿಯುತ್ತಾರೆ. ಸದರಿ ಅವಧಿಯಲ್ಲಿ ಕೆಲಸಗಾರರರಿಗೆ ನೋಟೀಸ್ ನೀಡುವುದಾಗಲೀ, ವಿಚಾರಣೆ ಮಾಡುವುದಾಗಲಿ ಮತ್ತು ಕೆಲಸದಿಂದ ತೆಗೆದುಹಾಕುವುದಾಗಲಿ ಆಗಿರುವುದಿಲ್ಲ ಎಂದರೆ ಸರಿ . ಸದರಿ ಅವಧಿಯಲ್ಲಿ 2 ನೇ ಪಾರ್ಟಿ ಸಂಸ್ಥೆ ಯ ವರು ಇ ಎಸ್ ಐ, ಪಿ ಎಫ್ ಮತ್ತು ಸಂಬಳ ಸರಿಯಾಗಿ ನೀಡುತ್ತಿದ್ದರು ನಂತರ ನೀಡುತ್ತಿರಲಿಲ್ಲ . ನಾವು ಕಾರ್ಮಿಕ ಇಲಾಖೆಯಲ್ಲಿ 2 ನೇ ಪಾರ್ಟಿ ಸಂಸ್ಥೆಯವರು ಸರಿಯಾಗಿ ಸಂಬಳ ನೀಡುತ್ತಿಲ ಎಂದು ವಿವಾದವನ್ನು ಎತ್ತಿರುತ್ತೇವೆ ಎಂದರೆ ಸರಿ . ಅಲ್ಲಿ ಸಂಬಳವನ್ನು ನೀಡಬೇಕು ಎಂದು ಆದೇಶವಾಗಿರುತ್ತದೆ ಎಂದರೆ ಸರಿ . ಸದರಿ ಅವಧಿಗೆ ಸಂಬಂಧಿಸಿದಂತೆ ಈ ಪ್ರಕರಣದಲ್ಲೂ ವೇತನವನ್ನು ನೀಡಬೇಕು ಎಂದು ವಿವಾವದವನ್ನು ಎತ್ತಿರುತ್ತೇವೆ ಎಂದರೆ ಸರಿ. ಈ ಪ್ರಕರಣದಲ್ಲಿ ಕೇಳಿದಂತಹ ನಾಲ್ಕು ತಿಂಗಳ ಸಂಬಳವು ವೇತನ ಪಾವತಿ ಕಾಯಿದೆ ಅಡಿಯಲ್ಲಿ ಈಗಾಗಲೇ ಆದೇಶವಾಗಿರುವುದರಿಂದ ಈ ವಿವಾದವು ಊರ್ಜಿತವಾಗುವುದಿಲ್ಲ ಎಂಬ ಸೂಚನೆಗೆ ಸಾಕ್ಷಿದಾರರು ಈ ಪ್ರಕರಣದಲ್ಲಿ ಗ್ರಾಚ್ಯುಟಿ ಪರಿಹಾರ ಕೇಳುತ್ತಿದ್ದೇವೆ ಎಂದು ನುಡಿಯುತ್ತಾರೆ . ನಾವು ಸಂಘವನ್ನು ಸೇರಿಕೊಂಡ ನಂತರ ಬೇಡಿಕೆಗಳ ಪಟ್ಟಿಯನ್ನು ಆಡಳಿತ ವರ್ಗದವರ ಮುಂದೆ ಇಟ್ಟಾಗ ಅವರು ನಮ್ಮ ಬೇಡಿಕೆಯನ್ನು ಈಡೇರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಬೇಡಿಕೆಯನ್ನು ಈಡೇರಿಸಿದೇ ಇದ್ದುದರಿಂದ ನಾವು ಸ್ಟೈಕ್ ಮಾಡಿರುತ್ತೇವೆ ಎಂದರೆ ಸರಿ . ನಾವು ಸ್ಟೈಕ್ ಮಾಡಿದಾಗ ಆಡಳಿತ ವರ್ಗದವರು ನ್ಯಾಯಾಲಕ್ಕೆ ಹೋಗಿ ನಮ್ಮ ವಿರುದ್ಧ ತಡೆಯಾಜ್ಞೆಯನ್ನು ತಂದಿರುತ್ತಾರೆ ಎಂದರೆ ಸರಿ .

ನಾವು ಸ್ಟ್ರೈಕ್ ಮಾಡಿದ 14 ದಿನಗಳ ಮೊದಲು ಆಡಳಿತ ವರ್ಗ ಕ್ಕೆ ನೋಟೀಸ್ ನ್ನು ನೀಡಿರುವುದಿಲ್ಲ ಎಂದರೆ ಸರಿ . ನಾವು ಸ್ಟ್ರೈಕ್ ಮಾಡುವ ಕಾಲಕ್ಕೆ ನಮ್ಮ ಮತ್ತು 2 ನೇ ಪಾರ್ಟಿ ಯವರ ನಡುವೆ ವಿವಾದಗಳು ಲೇಬರ್ ಆಪೀಸರ್ ಮುಂದೆ ಬಾಕಿ ಇತ್ತು ಎಂದರೆ ಸರಿ . ನಾವು ಕಾನೂನು ಬಾಹಿರ ಮುಷ್ಕರ ಮಾಡಿದ್ದರಿಂದ 2 ನೇ ಪಾರ್ಟಿ ಸಂಸ್ಥೆ ಯವರು ಲಾಕ್ ಔಟ್ ಮಾಡಿದರೂ ಅದೂ ಕಾನೂನುಬದ್ಧವಾಗಿರುತ್ತದೆ ಎಂದರೆ ಸರಿಯಲ್ಲ .
ನಿ ಡಬ್ಲ್ಯೂ- 4 ಟೈಂ ಇನ್ – ಟೈಂ ಔಟ್ ರಿಜಿಸ್ಟರ್ ಆಗಿರುತ್ತದೆ ಅಟೆಂಡೆನ್ಸ್ ರಿಜಿಸ್ಟರ್ ಆಗಿರುವುದಿಲ್ಲ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ಅದು ಎರಡೂ ಕೂಡಾ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿ ಡಬ್ಲ್ಯೂ- 4 ಕ್ಕೆ ಕೆಲವು ಕೆಲಸಗಾರರರು ಸಹಿ ಹಾಕಿರುತ್ತಾರೆ ಇನ್ನೂ ಕೆಲವರು ಹಾಕಿರುವುದಿಲ್ಲ ಎಂದರೆ ಸರಿ . ನಾವು ಕೆಲಸ ಮಾಡಿದ ಬಗ್ಗೆ ನಿ ಡಬ್ಲ್ಯೂ- 4 ನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. 2 ನೇ ಪಾರ್ಟಿ ಸಂಸ್ಥೆ ಯವರು ಜನವರಿ 2013 ರಲ್ಲಿ ಲಾಕ್ ಔಟ್ ಮಾಡಿರುತ್ತಾರೆ, ನಿರ್ದಿಷ್ಟವಾದ ದಿನಾಂಕ ನೆನಪಿಲ್ಲ. ನಮ್ಮ ಸಂಸ್ಥೆಯಲ್ಲಿ ಎಷ್ಟು ಜನ Land loosers ಇದ್ದಾರೆ ಎಂದು ನನಗೆ ಗೊತ್ತಿಲ್ಲ.

2 ನೇ ಪಾರ್ಟಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.